ಸರ್ಕ್ಯೂಲರ್ ಕಾನೂನು ಅಥವಾ ಚೇಂಜ್ ಮಾಡಲು ಸಾಧ್ಯವಿದೆಯೇ? ಇದನ್ನು ಎಷ್ಟು ದಿವಸಗಳಲ್ಲಿ ಮಾಡುತ್ತಾರೆ ಎಂಬುದನ್ನು ದಯವಿಟ್ಟು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ಸ್ಪಷ್ಟಪಡಿಸಿದ್ದೇನೆ ಯಾವ ಯಾವ ಬ್ಯಾಂಕುಗಳಲ್ಲಿ ಸರ್ಕಾರಿ ರೂಲ್ಸ್‌ಗಳನ್ನು ವ್ಯಯಲೇಟ್ ಮಾಡಿದ್ದಾರೆ ಅಥವಾ ಸರ್ಕಾರದ ಆದೇಶವನ್ನು ಅವರು ಪರಿಪಾಲನೆ ಮಾಡುವುದಿಲ್ಲ ಖಂಡಿತವಾಗಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಅದು ಯಾವುದೇ ಬ್ಯಾಂಕ್ ಇರಬಹುದು. ಮಾನ್ಯ ಸದಸ್ಯರು ಹೇಳಿದ ವಿಚಾರಗಳ ಬಗ್ಗೆ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುತ್ತೇನೆ.

ವಿಷಯ : ಸೇಡಂ ತಾಲ್ಲೂಕಿನ ಚಂದಾಪುರದ ಕಟ್ಟಡಗಳಲ್ಲಿ ಸೋರುವಿಕೆ.

1384
ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಕ್ಕರೆ ಮತ್ತು ಭೂ ಸೇನಾ ನಿಗಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಚಂದಾಪುರ ಗ್ರಾಮದಲ್ಲಿ ಭೂ ಸೇನಾ ನಿಗಮದವರು ಲಕ್ಷಾನುಗಟ್ಟಲೇ ಹಣವನ್ನು ಪಡೆದು ಹೊಸದಾಗಿ ನಿರ್ಮಾಣ ಮಾಡಿರುವ ಮೂರು ಕೋಣೆಗಳು ಅಲ್ಪಸ್ವಲ್ಪ ಮಳೆಯಿಂದಲೇ ಪೂರ್ತಿ ಸೋರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?
ಆ) ಈ ಕೋಣೆಗಳ ನಿರ್ಮಾಣಕ್ಕಾಗಿ ಸರ್ಕಾರದವರು ನೀಡಿರುವ ಹಣವೆಷ್ಟು?
ಇ) ಮೂರು ಕೋಣೆಗಳು ತಯಾರು ಮಾಡಿದ್ದು ಮೊದಲಿನ ಶಾಲೆ ಕಟ್ಟಡದ ಹಳೇ ಕಲ್ಲುಗಳಿಂದ ಕಟ್ಟಿಲ್ಲವೇ?
ಈ) ಹಳೇ ಕಲ್ಲುಗಳನ್ನು ಈ ಶಾಲೆಯ ಕಟ್ಟಡಕ್ಕೆ ಉಪಯೋಗಿಸಿದರೆ ಅವರ ಬಿಲ್‌ನಲ್ಲಿ ಈ ಕಲ್ಲುಗಳ ಬೆಲೆ ವಜಾ ಮಾಡಿದ್ದರೆ, ವಜಾ ಮಾಡಿರುವ ಹಣವೆಷ್ಟು?
ಉ) ಒಂದು ವೇಳೆ ಕಲ್ಲುಗಳ ಬೆಲೆ ವಜಾ ಮಾಡದಿದ್ದರೆ ವಜಾ ಮಾಡಿ ಈ ಶಾಲೆ ಕೋಣೆಗಳು ಸೋರದಂತೆ ವ್ಯವಸ್ಥೆ ಮಾಡಿ ಇದನ್ನು ವೀಕ್ಷಿಸಿದ ನಂತರವೇ ಶಿಕ್ಷಣ ಇಲಾಖೆಗೆ ಒಪ್ಪಿಸಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡುವುದು ಯಾವಾಗ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಹೌದು. ಛತ್ತನ್ನು ಹಾಕಿದ ಮರುದಿವಸ ಬಂದ ಮಳೆಯಿಂದಾಗಿ ಜಲ ನಿರೋಧಕ ಪ್ಲಾಸ್ಟ್ರಿಂಗ್ ಮಾಡದ ಕಾರಣ ಸೋರಿತ್ತು. ಆಮೇಲೆ ಜಲ ನಿರೋಧಕ ಪ್ಲಾಸ್ಟ್ರಿಂಗ್ ಮಾಡಿ ಪೂರ್ತಿ ಸೋರದಂತೆ ವ್ಯವಸ್ಥೆ ಮಾಡಲಾಗಿದೆ.
ಆ) ರೂ. 2.360 ಲಕ್ಷಗಳು
ಇ) ಹೌದು.
ಈ) ಹಳೇ ಕಲ್ಲಿನ ವೆಚ್ಚವನ್ನು ವಜಾ ಮಾಡಿರಲಿಲ್ಲಾ.
ಉ) ಹಳೇ ಕಲ್ಲಿನ ವೆಚ್ಚವನ್ನು ಅಂತಿಮ ಬಿಲ್ಲಿನಲ್ಲಿ ವಜಾ ಮಾಡಲಾಗುವುದು ಮತ್ತು ಶಾಲೆಯ ಕೋಣೆಗಳನ್ನು ಸೋರದಂತೆ ವ್ಯವಸ್ಥೆ ಈಗಾಗಲೇ ಮಾಡಲಾಗಿದೆ. ಹಾಗೂ ಶಾಲೆಯನ್ನು ಶಿಕ್ಷಣ ಇಲಾಖೆಯೊಂದಿಗೆ ಜಂಟಿಯಾಗಿ ವೀಕ್ಷಿಸಿ ಮಾರ್ಚ್ 93ರೊಳಗೆ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಒದಗಿಸಲಾಗುವುದು.

ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ : ಮಾನ್ಯ ಅಧ್ಯಕ್ಷರೆ, ಭೂ ಸೇನಾ ನಿಗಮದವರು ಉತ್ತರದಲ್ಲಿ ತಮಗೆ ತಪ್ಪು ಮಾಹಿತಿಗಳನ್ನು ನೀಡಿದ್ದಾರೆ. ಏತಕ್ಕೆಂದರೆ, ನಾನು ಸ್ವತಃ ಈ ಘಟನೆ ವೀಕ್ಷಿಸಿ ನಂತರ ಪ್ರಶ್ನೆಗಳನ್ನು ಕೇಳಿದ್ದೇನೆ. ಫತ್ತನ್ನು ಹಾಕಿದ ಮರುದಿವಸ ಬಂದ ಮಳೆಯಿಂದಾಗಿ ಜಲ ನಿರೋಧಕ ಪ್ಲಾಸ್ಟ್ರಿಂಗ್ ಮಾಡದ ಕಾರಣ ಸೋರಿತ್ತು. ಆಮೇಲೆ ಜಲ ನಿರೋಧಕ ಪ್ಲಾಸ್ಟ್ರಿಂಗ್ ಮಾಡಿ ಪೂರ್ತಿ ಸೋರದಂತೆ ವ್ಯವಸ್ಥೆ ಮಾಡಲಾಗಿದೆ ಎಂಬ ಒಂದು ಕುಂಟು ನೆಪವನ್ನು ಹೇಳಿದ್ದಾರೆ. ಈ ಗ್ರಾಮ ನನ್ನ ಸ್ವಂತ ಗ್ರಾಮಕ್ಕೆ 3-4 ಕಿ. ಮೀ. ಅಂತರದಲ್ಲಿ ಇರುವುದರಿಂದ ನಾನೇ ಸ್ವತಃ ಹೋಗಿ ವೀಕ್ಷಿಸಿದ್ದೇನೆ. ಅಲ್ಲಿ ಯಾವ ಮಳೆಯೂ ಬಂದಿಲ್ಲ. ಅಲ್ಲದೆ, ಜಲ ನಿರೋಧಕ ಪ್ಲಾಸ್ಟ್ರಿಂಗ್ ಮಾಡಿದೆ ಎಂದು ತಿಳಿಸಿರುವುದೂ ಸಹಾ ಸುಳ್ಳು ಉತ್ತರ. ಏಕೆಂದರೆ ಭೂಸೇನಾ ನಿಗಮದವರು ಈ ಕಟ್ಟಡವನ್ನು ಶಿಕ್ಷಣ ಇಲಾಖೆಯವರಿಗೆ ಒಪ್ಪಿಸಬೇಕೆಂದು, ಅವರು ಆಕ್ಸೆಪಣೆ ಮಾಡಿದ್ದಾರೆಂದು, ಅದಕ್ಕಾಗಿ ತಾವು ಶಿಕ್ಷಣ ಇಲಾಖೆಯವರಿಗೆ ಈ ಕಟ್ಟಡವನ್ನು ತೆಗೆದುಕೊಳ್ಳಲು ಹೇಳಬೇಕೆಂದು ನನ್ನ ಹತ್ತಿರ ಬಂದು 5-6 ದಿವಸವಾಯಿತು. ಆದರೆ ಇಷ್ಟು ತೀವ್ರವಾಗಿ ಇವರು ಪ್ಲಾಸ್ಟರಿಂಗ್ ಮಾಡಿದ್ದುದು ಯಾವಾಗ?

ಅಧ್ಯಕ್ಷರು : ತಾವು ನೇರವಾಗಿ ಪ್ರಶ್ನೆ ಕೇಳಿ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ನಾನು ನೇರವಾಗಿಯೇ ಪ್ರಶ್ನೆ ಕೇಳುತ್ತಿದ್ದೇನೆ. ಇವರು ಅಲ್ಲಿ ಪ್ಲಾಸ್ಟ್ರಿಂಗ್ ಮಾಡಿದ್ದುದು ಸುಳ್ಳು. 5-6 ದಿವಸದ ಮೊದಲು ಅವರು ನನ್ನ ಹತ್ತಿರ ಬಂದು ಈ ಕಟ್ಟಡವನ್ನು ಶಿಕ್ಷಣ ಇಲಾಖೆಯವರಿಗೆ ಒಪ್ಪಿಸಬೇಕೆಂದು ಬಂದಿದ್ದರು. 5-6 ದಿವಸದಲ್ಲಿ ಪ್ಲಾಸ್ಟ್ರಿಂಗ್ ಮಾಡಿದ್ದುದು ಯಾವಾಗ?

ಶ್ರೀ ಬಿ. ಎಸ್. ಪಾಟೀಲ್ (ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ ಅವರು ಸಂಪೂರ್ಣವಾಗಿ ಸುಳ್ಳು ಮಾಹಿತಿಯನ್ನು ಕೊಟ್ಟಿದ್ದಾರೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಆ ಕಟ್ಟಡಕ್ಕೆ ಮಳೆಗಾಲದಲ್ಲಿ ಆರ್.ಸಿ.ಸಿ ಹಾಕಿದ ಕಾರಣ ಆಗ ಸೋರಿದ್ದುದು ನಿಜ. ಆದರೆ ಈಗ ಕಟ್ಟಡ ಸಂಪೂರ್ಣವಾಗಿ ಪೂರ್ತಿಯಾಗಿದೆ. ನಾವು ಅದನ್ನು ಮಾರ್ಚ್ 31ರ ಒಳಗಾಗಿ ಶಿಕ್ಷಣ ಇಲಾಖೆಯ ಜೊತೆಗೆ ಜಂಟಿ ಇನ್ಸ್‌ಪೆಕ್ಷನ್ ಮಾಡಿ ಅವರ ಕಬ್ಜಾಕ್ಕೆ ಕೊಡುವಂತಹ ಒಂದು ವ್ಯವಸ್ಥೆ ಕೂಡ ಮಾಡಿದ್ದೇವೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ನಾನು 5-6 ದಿವಸದ ಮೊದಲು ಕಟ್ಟಡವನ್ನು ಸ್ವಂತವಾಗಿ ವಿಕ್ಷೀಸಿದ್ದೇನೆ. ಅವರು ಇದಕ್ಕೆ ಪ್ಲಾಸ್ಟ್ರಿಂಗ್ ಮಾಡಿದ್ದುದು ಯಾವಾಗ? ಎರಡನೆಯದು ಈ ಕೋಣೆಗಳ ನಿರ್ಮಾಣಕ್ಕಾಗಿ ಸರ್ಕಾರದವರು ನೀಡಿರುವ ಹಣ ಎಷ್ಟು ಎಂದು ಕೇಳಿದ್ದಕ್ಕೆ 2 ಲಕ್ಷ 36 ಸಾವಿರ ಎಂದಿದ್ದಾರೆ. ಈ ಮೂರು ಕೋಣೆಗಳನ್ನು ಕಟ್ಟಿದ್ದು ಮೊದಲನೇ ಶಾಲೆಯ ಕಟ್ಟಡದ ಹಳೇ ಕಲ್ಲುಗಳಿಂದ ಕಟ್ಟಿಲ್ಲವೇ ಎಂದರೆ ಹೌದು. ಎಂದು ಹೇಳಿ, ಹಳೇ ಕಲ್ಲಿನ ವೆಚ್ಚವನ್ನು ವಜಾ ಮಾಡಲಿಲ್ಲ ಎಂದು ಹೇಳಿದ್ದಾರೆ. ಇದನ್ನು ಏಕೆ ವಜಾ ಮಾಡಲಿಲ್ಲ? ಎಸ್ಟಿಮೇಟ್‌ನಲ್ಲಿ ವಜಾ ಮಾಡಬೇಕಾಗಿತ್ತಲ್ಲ. ಎರಡನೆಯದಾಗಿ ಕೊನೆಯ ಬಿಲ್ಲಿನಲ್ಲಿ ವಜಾ ಮಾಡಲಾಗುತ್ತದೆ ಎಂದು ತಿಳಿಸಿದ್ದೀರಿ. ಕೊನೆಯ ಬಿಲ್ ಮಾಡುವುದು ಯಾವಾಗ? ಶಿಕ್ಷಣ ಇಲಾಖೆಯವರಿಗೆ ಒಪ್ಪಿಸುವುದು ಹತ್ತಿರ ಬಂದಿದ್ದರೂ ಇನ್ನು ಯಾವಾಗ ಬಿಲ್ ಮಾಡುತ್ತೀರಿ, ಇದೆಲ್ಲಾ ಸುಳ್ಳು ಉತ್ತರವಲ್ಲವೇ?

ಶ್ರೀ ಬಿ. ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಹಳೇ ಕಟ್ಟಡ ಇದ್ದದ್ದು ನಿಜ. ಆದರೆ ಒಂದು ಕೋಣೆಯಲ್ಲಿ ಒಂದೆರಡು ಕಡೆ ಗೋಡೆ ಇತ್ತು ಅಷ್ಟೇ. ಅದರ ಕಿಮ್ಮತ್ತು ಕೇವಲ 975

ರೂಪಾಯಿ ಇದ್ದು ಅದನ್ನು ಕೊನೆಯ ಬಿಲ್ ಮಾಡುವ ಕಾಲಕ್ಕೆ ವಜಾ ಮಾಡುವಂತಹ ಸಂಪ್ರದಾಯ ಇದ್ದುದರಿಂದ ಕೊನೆಯಲ್ಲಿ ವಜಾ ಮಾಡುತ್ತೇವೆ. ಈಗ ಕೋಣೆಗಳು ಸಂಪೂರ್ಣವಾಗಿ ತಯಾರಾಗಿವೆ. ಅದನ್ನು ಇಷ್ಟರಲ್ಲಿಯೇ ಅವರ ಕಬ್ಜಾಕ್ಕೆ ಒಪ್ಪಿಸುತ್ತಿದ್ದೇವೆ.

ಶ್ರೀ ಬಾಬುರಾವ್ ಚವಾಣ್ : ಸನ್ಮಾನ್ಯ ಅಧ್ಯಕ್ಷರೇ, ಈ ಭೂ ಸೇನಾ ನಿಗಮದವರು ಸಾಮಾನ್ಯವಾಗಿ ಕಟ್ಟಡ ರೆಡಿ ಆದ ನಂತರ ಹೇಗೆ ರೆಡಿ ಮಾಡಿದ್ದಾರೆ, ಏನು ಮಾಡಿದ್ದಾರೆ ಎನ್ನುವುದನ್ನು ಶಾಸಕರ ಗಮನಕ್ಕೆ ತರಬಾರದೇ, ಎಸ್ಟಿಮೇಟ್‌ನಲ್ಲಿ ಇರತಕ್ಕಂಥ ಕ್ವಾಲಿಟಿ, ಕ್ವಾಂಟಿಟಿ ಏನು ಇದೆ ಅದನ್ನೂ ಕೂಡ ಸರಿಯಾಗಿ ಮಾಡಲಾರದೆ, ನೇರವಾಗಿ ಶಿಕ್ಷಣ ಇಲಾಖೆಯವರಿಗೆ ಒಪ್ಪಿಸಿಬಿಡುತ್ತಾರೆ. ಒಪ್ಪಿಸಿದ ನಂತರ ನಾಲ್ಕೈದು ತಿಂಗಳಲ್ಲಿ ಮಳೆ ಬಂದರೆ ಸೋರತಕ್ಕಂತಹ ಎಷ್ಟೋ ಬಿಲ್ಡಿಂಗ್‌ಗಳನ್ನು ನಾನು ಕಣ್ಣಾರೆ ನೋಡಿದ್ದೇನೆ. ಮಾನ್ಯ ಮಂತ್ರಿಗಳು ಇದನ್ನು ಹೇಳಬೇಕು. ಈ ಭೂಸೇನೆ ನಿಗಮದವರು ಅವಸರವಸರದಲ್ಲಿ ಕಟ್ಟಿ ಅದನ್ನು ಶಿಕ್ಷಣ ಇಲಾಖೆಯವರಿಗೆ ಏನು ಹ್ಯಾಂಡ್‌ಓವರ್ ಮಾಡುತ್ತಾರೆ, ಅದು ಸರಿಯಾಗಿ ಮಾಡುವುದಿಲ್ಲ. ಅದಕ್ಕೋಸ್ಕರ ತಾವು ಭೂಸೇನಾ ನಿಗಮದವರಿಗೆ ಹಿಡಿತ ಹಾಕುತ್ತೀರ ಅಥವಾ ಹಾಕುವುದಿಲ್ಲವೇ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎಂ. ರಾಜಶೇಖರಮೂರ್ತಿ : ಅಧ್ಯಕ್ಷರೇ, ಅದರಲ್ಲಿ ರೂಫ್ ಹಾಕಬೇಕಾದರೆ ಸ್ಪೇರ್ಸ್ ಸ್ಲಾಬ್ಸ್ ಇಟ್ಟು ರೂಫ್ ಹಾಕುತ್ತಿದ್ದರು. ಆ ರೂಫ್ ಹಾಕಿದರೆ ಅದನ್ನು ಓಪನ್ ಮಾಡುವ ದಿವಸದಿಂದಲೇ ಮಳೆಯಿಂದ ಸೋರುವುದಕ್ಕೆ ಶುರುವಾಯಿತು. ಈಚೆಗೆ ಏನು ಮಾಡಿದ್ದಾರೆಂದರೆ ಇನ್ನು ಆ ಸ್ಲಾಬ್ಸ್ ಹಾಕಿ ರೂಫ್ ಹಾಕುವುದು ಬೇಡ, ಆರ್.ಸಿ.ಸಿ. ಹಾಕಬೇಕು ಎಂದು ಮಾಡಿದ್ದಾರೆ. ಆ ತಪ್ಪು ಹಿಂದೆ ಏನಾಯಿತು ಅದು ಈಚೆಗೆ ರೆಕ್ಟಿಫೈ ಆಗುತ್ತಿದೆ.

ಅಧ್ಯಕ್ಷರು : ಶ್ರೀಮಾನ್ ಸಿಂಧ್ಯಾರವರೇ, ಕೃಷಿ ಮಂತ್ರಿಗಳು ನಿನ್ನೆ ದೆಲ್ಲಿಗೆ ಹೋಗಬೇಕಾಗಿರುವುದರಿಂದ ಲೆಟರ್ ಕೊಟ್ಟು ಹೋಗಿದ್ದಾರೆ. ಆದ್ದರಿಂದ ನಿಮ್ಮ ಪ್ರಶ್ನೆಯನ್ನು ಮುಂದೆ ತೆಗೆದುಕೊಳ್ಳೋಣ.

<u>ವಿಷಯ : ರಾಜ್ಯದಲ್ಲಿನ ಕೊಳವೆ ಬಾವಿಗಳ ದುರಸ್ತಿಗೆ ಕ್ರಮ.</u>

1451

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣ ಪ್ರದೇಶದಲ್ಲಿ ಕೆಟ್ಟಿರುವ ಕೊಳವೆ ಬಾವಿಗಳನ್ನು ದುರಸ್ತಿಗೊಳಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಆ) ರಾಜ್ಯದಲ್ಲಿರುವ ಒಟ್ಟು ಕೊಳವೆ ಬಾವಿಗಳೆಷ್ಟು?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ಯ ಸಚಿವರು) :

ಅ) 1. 1-4-87ರ ನಂತರ ಕೈಪಂಪುಗಳ ನಿರ್ವಹಣೆಯನ್ನು ಮಂಡಲ ಪಂಚಾಯತಿಗೆ ವಹಿಸಲಾಗಿದೆ. ಪ್ರತಿ ತಾಲ್ಲೂಕಿನಲ್ಲಿರುವ ಜಿಲ್ಲಾಪರಿಷತ್ ಇಂಜಿನಿಯರಿಂಗ್ ಉಪ-ವಿಭಾಗಗಳು ಮಂಡಲ ಪಂಚಾಯಿತಿಗೆ ಬೆಂಬಲ ನೀಡುತ್ತದೆ.